ಸಮಾರಂಭ ಪ್ರಾರಂಭವಾಯಿತು. ಶೆಟ್ಟರು ಮೊದಲಿಗೆ ಮಾತು ಪ್ರಾರಂಭಿಸಿ, 'ಸೀತಾಪುರದ ಅಭಿವೃದ್ಧಿಯೇ ತನ್ನ ಧ್ಯೇಯವೆಂದುಕೊಂಡು, ನಮ್ಮ ದೇವರ ದಯದಿಂದ ಕಾರಂತರು ಸೀತಾಪುರಕ್ಕೆ ಬಂದಿದ್ದಾರೆ. ನಿಯೋದ ಮ್ಯಾನೇಜರ್ ಕೂಡಾ ಪ್ರೀತಿಯಿಂದ ಎಲ್ಲರಿಗೂ ಸ್ಮಾರ್ಟ್‌ಫೋನ್ ಕೊಡುವುದು ಮಾತ್ರವಲ್ಲದೆ ಟವರನ್ನು ಕೂಡ ಉಚಿತವಾಗಿ ನಿರ್ಮಿಸಿದ್ದಾರೆ' ಎಂದು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮ್ಯಾನೇಜರ್‌ಗೆ ಮತ್ತೆ ಸಂಜಯನಿಗೆ ಆನಂದಣ್ಣ ಹಾರ ಹಾಕಿ ಗೌರವಿಸಿದರು.

ಆಮೇಲೆ ಆನಂದಣ್ಣ ಒಬ್ಬೊಬ್ಬರನ್ನೇ ವೇದಿಕೆಗೆ ಕರೆದರು. ಅವರಿಗೆ ಮ್ಯಾನೇಜರ್ ಸ್ಮಾರ್ಟ್‌ಫೋನ್ ಕೊಟ್ಟರು. ಪ್ರಭಾಕರ ಫೋಟೊ ವಿಡಿಯೊ ಮಾಡುತ್ತಿದ್ದ. ಕೊನೆಗೆ ಮ್ಯಾನೇಜರ್, ನಿಯೋ ಫೋನ್ ನಮ್ಮ ದೇಶದ ಹಳ್ಳಿಗಳನ್ನು ಜೋಡಿಸಿ ಅಭಿವೃದ್ಧಿಗೆ ಹೇಗೆ ಕಾರಣವಾಗುತ್ತಿದೆ ಎಂಬ ಪುಟ್ಟ ಭಾಷಣ ಮಾಡಿದರು.

ಸಂಜಯ್ ಮಾತಿಗೆ ನಿಂತು ತಾನು ಈ ಸಮಾರಂಭದ ನಂತರ ಎಲ್ಲರಿಗೂ ಸ್ಮಾರ್ಟ್‌ಫೋನ್ ಉಪಯೋಗಿಸುವುದನ್ನು ತಿಳಿಸಿ ಕೊಡುವುದಾಗಿ ಹೇಳಿದ.

ಮ್ಯಾನೇಜರ್ ಅನ್ನು ಬೀಳ್ಕೊಟ್ಟ ನಂತರ ಸಂಜಯ್ ಹಿಂತಿರುಗಿ ವೇದಿಕೆಗೆ ಬಂದು ಒಂದು ಸ್ಮಾರ್ಟ್‌ಫೋನ್ ಅನ್ನು ಸಭೆಗೆ ತೋರಿಸಿ ಅದನ್ನು ಹೇಗೆ ಪ್ರಾರಂಭ ಮಾಡುವುದು, ಹೇಗೆ ಬಂದ್ ಮಾಡುವುದು, ಯಾವ ಯಾವ ಪ್ರೋಗ್ರಾಮ್ ಇರುತ್ತವೆ, ಅವುಗಳಿಂದ ಏನೆಲ್ಲಾ ಉಪಯೋಗಗಳು ಆಗುತ್ತವೆ ಎಂದು ವಿವರವಾಗಿ ಹೇಳಿದ.

ಆನಂದಣ್ಣ ಆಶಾಳಿಗಾಗಿ ಒಂದು ಚಂದದ ಫೋನನ್ನು ಆಗಲೇ ಕಾದಿರಿಸಿದ್ದರು. ಆಶಾ ಕೂಡ ಸಂಜಯ್ ಪಾಠ ಕೇಳಿ ಫೋನ್ ಹೇಗೆ ಉಪಯೋಗಿಸುವುದು ಎನ್ನುವುದನ್ನು ಕಲಿತಳು. ಅಲ್ಲಿದ್ದ ಹತ್ತಿಪ್ಪತ್ತು ಹುಡುಗರಿಗೆ ಫೋನ್‌ನ ಆಪರೇಶನ್ ಬಹಳ ಸುಲಭವಾಗಿ ಗೊತ್ತಾದರೆ, ಕೆಲವು ಜನಕ್ಕೆ ಅದನ್ನು ಉಪಯೋಗಿಸುವ ವಿಧಾನ ತಿಳಿಯಲಿಲ್ಲ. ಸಂಜಯ್ ಈ ಹುಡುಗರನ್ನು ಬದಿಗೆ ಕರೆದು ಅವರಿಗೆ ಸರಿಯಾಗಿ ವಿವರಿಸಿ ಉಳಿದವರಿಗೆ ಅದನ್ನು ತಿಳಿಸಲು ಹೇಳಿದ.

ಆ ಸಂಜೆ ಸೀತಾಪುರವು ಸ್ಮಾರ್ಟ್‌ಫೋನ್ ಉಪಯೋಗಿಸಲು ಕಲಿತು 'ಸ್ಮಾರ್ಟ್' ಹಳ್ಳಿ ಆಯಿತು.

ಆನಂದಣ್ಣ ಸಂಜಯನನ್ನು ನೋಡಿ 'ಕಾರಂತರೇ, ನಿಮ್ಮ ಸ್ಮಾರ್ಟ್‌ಫೋನ್ ಐಡಿಯಾ ಇದೆಯಲ್ಲ, ಅದು ಬಹಳ ಯಶಸ್ವಿಯಾದ ಹಾಗೆ ಕಾಣುತ್ತಿದೆ. ನೋಡಿ, ಊರಿನ ಎಲ್ಲಾ ಜನ ಖುಷಿಯಾಗಿದ್ದಾರೆ. ಇಲ್ಲದಿದ್ದರೆ ಇಷ್ಟು ಬೇಗ ಜನ ನಮ್ಮ ಯೋಜನೆಗೆ ಒಪ್ಪುತ್ತಿರಲಿಲ್ಲ' ಅಂದರು.

ಮನೆಗೆ ಹಿಂದೆ ಬಂದ ಸಂಜಯ್ ಮತ್ತು ಪ್ರಭಾಕರ ತಾವು ತೆಗೆದಿದ್ದ ಎಲ್ಲ ಫೋಟೊ, ವಿಡಿಯೊಗಳನ್ನು ಅಪ್ಲೋಡ್ ಮಾಡಿದರು. ಸಂಜಯನ ಅಮೆರಿಕದ ಟೀಮ್ ಅದನ್ನು ಸರಿಯಾಗಿ ಎಡಿಟ್ ಮಾಡಿ ಇಂಟರ್ನೆಟ್‌ಗೆ ಹಾಕಲು ಮುಂದಾಯಿತು.

ಸೀತಾಪುರಕ್ಕೆ ಇಂಟರ್ನೆಟ್ ಬಂದ ಕಥೆ ಜಗತ್ತಿಗೆಲ್ಲಾ ಗೊತ್ತಾಯಿತು. ಸೀತಾಪುರದ ಕಾಡು, ಅದರಲ್ಲಿ ಟವರ್‌ನ ಕಂಬಗಳನ್ನು ಸಾಗಿಸಿದ ವಿಧಾನ, ಸೆಲ್ ಫೋನ್ ವಿತರಣಾ ಸಮಾರಂಭ, ಮೊದಲ ಬಾರಿಗೆ ಸೆಲ್ ಫೋನ್ ಉಪಯೋಗಿಸಿದವರ ಮುಖದ ಹೊಳಪು ಇತ್ಯಾದಿ ಇಡೀ ಸೋಶಿಯಲ್ ಮೀಡಿಯಾದಲ್ಲಿ ಕಾಣಿಸಿಕೊಂಡಿತು. ಸಂಜಯ್ ಸೀತಾಪುರವನ್ನು ಎರಡು ತಿಂಗಳಲ್ಲೇ ಪರಿವರ್ತನೆ ಮಾಡುವುದಾಗಿ ಇಡೀ ವಿಶ್ವದ ಎದುರು ಪಣತೊಟ್ಟಿದ್ದ. ಆಗ ಇದರಲ್ಲಿ ಸಂಜಯ್ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತಾನೆ ಅಂತ ಹಲವಾರು ಜನ ಸೋಶಿಯಲ್ ಮೀಡಿಯಾದಲ್ಲಿ ಚರ್ಚಿಸುತ್ತಿದ್ದರು. ಕೆಲವರು ಇದೆಲ್ಲಾ ಬರೀ ಬೊಗಳೆ, ಇಪ್ಪತ್ತೊಂದನೇ ಶತಮಾನದಲ್ಲಿ ಸೀತಾಪುರದಂಥ ಗ್ರಾಮವೇ ಇಲ್ಲ, ಇದೆಲ್ಲಾ ನಾಟಕ ಎಂದೆಲ್ಲಾ ಬರೆದರು. ಕೆಲವು ಜನ ಇಲ್ಲ ಈಗಲೂ ಪಶ್ಚಿಮ ಘಟ್ಟದ ಬದಿಯಲ್ಲಿ ಕೆಲವು ಗ್ರಾಮಗಳು ಆಧುನೀಕತೆಗೊಳಗಾಗದೆ ಇವೆ ಎಂಬುದನ್ನೂ ಬರೆದರು.

ಈ ಚರ್ಚೆಯ ನಡುವೆ ಸಂಜಯ್ ಒಂದು ದೊಡ್ಡ ಪ್ರಕಟಣೆ ಮಾಡಿದ.

'ನಿಮ್ಮಲ್ಲಿ ಎಷ್ಟೋ ಜನ ಸೀತಾಪುರ ಇಲ್ಲ ಅನ್ನುವವರಿದ್ದೀರಿ... ಇನ್ನು ಕೆಲವರು ಈ ತರಹ ಎರಡು ತಿಂಗಳಲ್ಲಿ ಕೇವಲ ಇಂಟರ್ನೆಟ್ ಮುಖಾಂತರ ಹಳ್ಳಿಯ ಬದಲಾವಣೆ ತರಲು ಸಾಧ್ಯವಿಲ್ಲ ಅನ್ನುವವರಿದ್ದೀರಿ. ಹಾಗಾಗಿ ನಾನು ಒಂದು ದೊಡ್ಡ ಪ್ರಕಟಣೆ ಮಾಡುತ್ತಿದ್ದೇನೆ. ನನ್ನ ಜೊತೆ ಇಲ್ಲಿಗೆ ಬಂದು ಸೀತಾಪುರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನಾನು ಇಬ್ಬರಿಗೆ ಅವಕಾಶ ಮಾಡಿಕೊಡುತ್ತೇನೆ. ಆ ಇಬ್ಬರು ಸೀತಾಪುರದಲ್ಲಿ ಉಳಕೊಳ್ಳುವ ಅವಕಾಶವನ್ನು ನಾನು ಮಾಡಿಕೊಡುತ್ತೇನೆ. ಆದರೆ ಬರುವವರು ಈ ಹಳ್ಳಿಯ ಕಷ್ಟದ ಬದುಕಿಗೆ ಒಗ್ಗಿಕೊಳ್ಳಬೇಕು. ನನ್ನೊಂದಿಗೆ ಸೀತಾಪುರದ ಜನರ ಜೊತೆ ಬೆಸೆಯಬೇಕು' ಎನ್ನುತ್ತಾ ಹಲವಾರು ಷರತ್ತುಗಳನ್ನು ಮುಂದಿಟ್ಟ.

ಸಾವಿರಾರು ಜನರು ಸೀತಾಪುರಕ್ಕೆ ಬರಲು ಮನಸ್ಸು ಮಾಡಿದರು. ಈಗ ಇಬ್ಬರನ್ನು ಹೇಗೆ ಆಯ್ಕೆಮಾಡುವುದು ಎಂಬ ಸಮಸ್ಯೆ ಬಂತು.

ಇದೇ ಸಮಸ್ಯೆಯನ್ನು ಸೀತಾಪುರದ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡರೆ? ಎಂದುಕೊಂಡ. ಸಂಜಯ್ ಅದಕ್ಕಾಗಿ ಒಂದು ಸ್ಪರ್ಧೆಯನ್ನು ಯೋಜಿಸಿದ. ಆ ಸ್ಪರ್ಧೆಯಲ್ಲಿ ಯಾರು ಹೆಚ್ಚು ಜನಪ್ರಿಯರಾಗುತ್ತಾರೋ ಅವರನ್ನು ಸೀತಾಪುರಕ್ಕೆ ಕರೆಯುವುದಾಗಿ ಘೋಷಿಸಿದ. ಕೊನೆಗೆ ಸೀತಾಪುರಕ್ಕೆ ಬರಲು ಒಪ್ಪಿದವರಲ್ಲಿ ಕೇವಲ ಐದು ಹುಡುಗರು ಮತ್ತು ಐದು ಹುಡುಗಿಯರನ್ನು ಸಂಜಯ್ ಆಯ್ಕೆ ಮಾಡಿದ. ಅವರು ಸಂಜಯನ ಪ್ರೋಗ್ರಾಮ್‌ನಲ್ಲಿ ತಮ್ಮ ಪರಿಚಯ ಹೇಳಿಕೊಂಡು ತಾವು ಯಾಕೆ ಸೀತಾಪುರಕ್ಕೆ ಬರಲು ಹೆಚ್ಚು ಯೋಗ್ಯರು ಅಂತ ಹೇಳಿಕೊಂಡಿದ್ದರು. ಅವರ ಕುರಿತು ಸೋಶಿಯಲ್ ಮೀಡಿಯಾದಲ್ಲಿ ಪ್ರಚಾರ ನಡೆಯಿತು... ಹಾಗೇ ಅವರನ್ನು ಸೀತಾಪುರಕ್ಕೆ ಕರೆತರಲು 'ಫಂಡ್ ರೈಸಿಂಗ್' ಮಾಡುವ ಉದ್ದೇಶವೂ ಘೋಷಣೆಯಾಯಿತು. ಜೊತೆಗೆ ಇನ್ನೂ ಸೀತಾಪುರಕ್ಕೆ ಬರುವವರ ಆಯ್ಕೆ ಇದೆ. ಅದು ಇನ್ನೊಂದು ವಾರದಲ್ಲಿ ಕೊನೆಗೊಳ್ಳುವುದಾಗಿ ಘೋಷಣೆಯಾಯಿತು. ಜನ ವಿಶ್ವದಾದ್ಯಂತ ಹುಚ್ಚೆದ್ದರು. ಅದರಲ್ಲೂ ಇದೊಂದು ನಿಜ ಜೀವನದ 'ಬಿಗ್ ಬಾಸ್' ಆಗಿತ್ತು. ಹೇಗೆ ಈ ಹೊರಗಿನ ಜನ ಸೀತಾಪುರಕ್ಕೆ ಒಗ್ಗಿಕೊಳ್ಳುತ್ತಾರೆ ಎಂಬುದು ಜನರಲ್ಲಿ ಕುತೂಹಲ ಮೂಡಿಸಿತು. ಇದರ ಉದ್ದೇಶ ಒಂದು ಹಳ್ಳಿಯ ಉದ್ಧಾರ ತಾನೇ? ಇಂತಹ ಪ್ರಯೋಗವನ್ನು ಆಸಕ್ತರು ಎಲ್ಲೂ ನೋಡಿರಲಿಲ್ಲ. ಅಷ್ಟರಲ್ಲಿ ಇನ್ನೊಂದು ವಾರದಲ್ಲಿ ಮತ್ತೆ ಎರಡು ಜನರನ್ನು ಆಯ್ಕೆ ಮಾಡುವ ವೋಟಿಂಗ್ ನಡೆಯುವುದಾಗಿ ಘೋಷಣೆಯಾಯಿತು.

ಏಳು

ನೋಡನೋಡುತ್ತಿದ್ದಂತೆ 'ಒಂದು ಹಳ್ಳಿ, ಎರಡು ತಿಂಗಳು' ಕಾರ್ಯಕ್ರಮದ ಎರಡನೇ ವಾರ ಬಂದೇ ಬಿಟ್ಟಿತು.

ಆನಂದಣ್ಣ ಬೆಳಗ್ಗೆ ಎದ್ದವರೇ ಶಾಸ್ತ್ರಿಗಳ ಮನೆಗೆ ಬಂದು ಸಂಜಯ್ ಹೊರಬರುವುದನ್ನೇ ಕಾದು ಕುಳಿತಿದ್ದರು. ಸಂಜಯ್ ಹೊರ ಬಂದ ಕೂಡಲೇ ಅವನನ್ನು ಕರಕೊಂಡು ಶೆಟ್ಟರ ಮನೆಗೆ ಹೊರಟರು. ಆಶಾಳನ್ನು ನೋಡಿ 'ಆಶಾಮ್ಮ, ನೀವೂ ನಮ್ಮ ಟೀಮೇ! ನಮ್ಮ ಜೊತೆ ಬರ್ತೀರಾ?' ಪ್ರಶ್ನಿಸಿದರು.

ಆಶಾ ಹೊರಡಲು ಅನುವಾದಳು. ಶೆಟ್ಟರ ಮನೆಯಲ್ಲಿ ಎಲ್ಲರೂ ಸೇರಿದರು.

'ಕಾರಂತರೇ, ಈಗ ಒಂದು ವಾರವೇ ಆಯಿತು. ನಾವು ಇಂಟರ್ನೆಟ್ ತಂದದ್ದೂ ಆಯಿತು. ಜನರಿಗೆ ಸೆಲ್ ಫೋನ್ ಕೊಟ್ಟದ್ದೂ ಆಯಿತು. ಜನ ಈಗ ಬಹಳ ಚೆನ್ನಾಗಿ ಸೆಲ್ ಫೋನ್ ಉಪಯೋಗಿಸಲು ತೊಡಗಿದ್ದಾರೆ. ಇನ್ನೇನು ಮಾಡಬೇಕು?' ಶೆಟ್ಟರು ಕೇಳಿದರು.

ಸಂಜಯ್ ಸ್ವಲ್ಪ ಆಲೋಚನೆ ಮಾಡಿ ಹೇಳತೊಡಗಿದ.

'ಮುಂದಿನ ಎರಡು ವಾರ ಬಹಳ ಮುಖ್ಯವಾದದ್ದು. ಈ ವಾರ ನಾವು ಸೀತಾಪುರಕ್ಕೆ ಒಂದು ಕಾಲುದಾರಿ ಮಾಡಬೇಕಾಗಿದೆ. ಜನ ಕಾಡಿನ ಮುಖಾಂತರ ಯಾರ ನೆರವೂ ಇಲ್ಲದೆ ಸೀತಾಪುರಕ್ಕೆ ಬರುವ ಹಾಗೆ ಆಗಬೇಕು. ಮಾಡಬಹುದಾ?' ಕೇಳಿದ.

ಸಂಜಯ್ ತನ್ನ ವಾಕ್ಯ ಮುಗಿಸುವ ಮೊದಲೇ ಆನಂದಣ್ಣ, 'ಕಾರಂತರೇ, ನೀವು ಹೇಳಿದರೆ ಆಗದೆ ಇರ್ತದ? ಖಂಡಿತ ಮಾಡುವ. ನಾನು ಮೊದಲು ಎಲ್ಲಾ ಸೆಲ್ ಫೋನ್ ತೆಗೆದುಕೊಂಡ ಯುವಕರನ್ನು ಒಟ್ಟು ಸೇರಿಸ್ತೇನೆ. ನಾಳೆಯಿಂದ ಶ್ರಮದಾನ ಶುರು. ನಾವು ನಮ್ಮ ಕಾಡಿನ ಈಚೆ ಬದಿಯಿಂದ ಆಚೆಬದಿಯವರೆಗೆ ಗುಡ್ಡದ ನಡುವೆ ದಾರಿ ಮಾಡುವ. ಸ್ವಲ್ಪ ಮರ ಮತ್ತು ಬೀಳಲುಗಳನ್ನು ಕಡಿದರೆ ಒಂದೆರಡು ಜನ ಸಮಾನಾಂತರವಾಗಿ ನಡೆದುಕೊಂಡು ಬರುವಂಥ ಕಾಲುದಾರಿ ಮಾಡುವುದು ಅಷ್ಟು ದೊಡ್ಡ ಕೆಲಸ ಅಲ್ಲ' ಅಂದರು.